## ದಿನಾಂಕ: 18.06.2020 ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

**ಹಾಜರಿದ್ದ ಅಧಿಕಾರಿ/ನೌಕರರು:**

| | | |
|---|---|---|
| 2) | ಶ್ರೀ ಸೋಮರಾಜು | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ವಿಭಾಗ |
| 3) | ಶ್ರೀ ನಂದೀಶ್.ಎಂ.ಎಸ್ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ |
| 5) | ಶ್ರೀ ಪ್ರದೀಪ್ | : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ |
| 6) | ಶ್ರೀ ಸುಷ್ಮ | : ಕಿರಿಯ ಇಂಜಿನಿಯರ್(ತಾಂ), ಶ್ರೀರಂಗಪಟ್ಟಣ |
| 8) | ಶ್ರೀ ಮಂಜುನಾಥ | : ಸಹಾಯಕ ಇಂಜಿನಿಯರ್(ವಿ), ಅರಕೆರೆ ಶಾಖೆ |
| 9) | ಶ್ರೀ ಸುರೇಂದ್ರ ಮೋಹನ್ | : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ |
| 10) | ಶ್ರೀ ಕೆ.ಆರ್. ರಾಜು | : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ |
| 11) | ಶ್ರೀ ನವೀನ್‌ಕುಮಾರ್ | : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ |
| 12) | ಶ್ರೀ ಪ್ರವೀಣ್ | : ಪ್ರಭಾರ ಸಹಾಯಕ, ಪಟ್ಟಣ ವಿಭಾಗ |

ಜನಸಂಪರ್ಕ ಸಭೆಯ ಅಧ್ಯಕ್ಷರು ಬೆಳಗ್ಗೆ 11.30ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಹಾಗೂ ಗ್ರಾಹಕರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | **ಶ್ರೀ ಪುಟ್ಟರಾಜು, ಮೇಳಾಪುರ ಮೊಬೈಲ್ ಸಂಖ್ಯೆ: 9448754837** | |
| | 1. ಹಾಲಿ 63 ಕೆವಿಎ ಟಿ.ಸಿ. ಅಧಿಕ ಹೊರೆಯಾಗಿರುತ್ತದೆ ಆದಕ್ಕೆ ಹೆಚ್ಚುವರಿಯ ಪರಿರ್ವಕವನ್ನು ಅಳವಡಿಸಬೇಕೆಂದು ತಿಳಿಸಿರುತ್ತಾರೆ | UNIP ಯೋಜನೆಯಡಿಯಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ಈಗಾಗಲೇ ಕ್ರಮವಹಿಸಲಾಗಿದೆ ಎಂದು ತಿಳಿಸಲಾಗಿದೆ. |
| 2) | **ಶ್ರೀ ಯದುರಾಜ, ಮರಳೆಗಾಲ, ಮೊಬೈಲ್ ಸಂಖ್ಯೆ: 9886728351** | |
| | 1. ತೋಟದ ಮನೆಗೆ ಎನ್.ಜೆ.ವೈ ಮಾರ್ಗ ಆಳವಡಿಸಿಕೊಡಬೇಕೆಂದು ಕೇಳಿರುತ್ತಾರೆ.<br><br>2. ಕೃಷ್ಣಾಪುರ ಐ.ಪಿ. ಟಿ.ಸಿ ಓವರ್ ಲೋಡ್ ಆಗಿದ್ದು, ಹೆಚ್ಚುವರಿಯಾಗಿ ಟಿ.ಸಿ ಆಳವಡಿಸಿಕೊಡಬೇಕೆಂದು ಕೋರಿರುತ್ತಾರೆ. | 1. ವಾಸದ ಮನೆಯು ಫಾರಂ ಹೌಸ್ ಆಗಿದ್ದು, ಗ್ರಾಮ ಠಾಣಾ ವ್ಯಾಪ್ತಿಯಿಂದ ಹೊರಗೆ ಇರುವ ಕಾರಣ ಎನ್.ಜೆ.ವೈ. ಮೇಲೆ ಸಂಪರ್ಕ ಬೇಕಾದಲ್ಲಿ, ಸ್ವಯಂ ಕಾರ್ಯನಿರ್ವಹಣಾ ಯೋಜನೆಯಡಿಯಲ್ಲಿ ಕಂಬ ಹಾಗೂ ವಾಹಕವನ್ನು ಆಳವಡಿಸಿಕೊಳ್ಳಲು ತಿಳಿಸಲಾಯಿತು.<br>2. ಈ ಪರಿವರ್ತಕದ ಮೇಲೆ ಅನಧಿಕೃತ ಪಂಪ್‌ಸೆಟ್‌ಗಳು ಹೆಚ್ಚಾಗಿದ್ದು, ಕೇವಲ 3-4 ಐ.ಪಿ. ಸೆಟ್‌ಗಳು ಅಧಿಕೃತವಾಗಿರುತ್ತವೆ. ಅನಧಿಕೃತವಾಗಿರುವ ಐ.ಪಿ. ಸೆಟ್‌ಗಳನ್ನು ಹಲವಾರು ಬಾರಿ ತೆರವುಗೊಳಿಸಿದದರೂ ಕೂಡ ರೈತರು ಪುನ: ಅನಧಿಕೃತವಾಗಿಯೇ ಬಳಸುತ್ತಿರುತ್ತಾರೆ. ಆದುದರಿಂದ ಅನಧಿಕೃತವಾಗಿ ಬಳಸುತ್ತಿರುವವರು ನಿಯಮಾನುಸಾರ ಸಕ್ರಮಗೊಳಿಸಿಕೊಂಡರೆ ಹೆಚ್ಚುವರಿ ಪರಿವರ್ತಕವನ್ನು ಆಳವಡಿಸಿಕೊಡಲಾಗುವುದೆಂದು ತಿಳಿಸಲಾಯಿತು. |
| 3) | **ಶ್ರೀ ಎಂ.ಚಂದ್ರು, ದೊಡ್ಡಪಾಲ್ಯ ಮೊಬೈಲ್ ಸಂಖ್ಯೆ: 9900336401** | |
| | ಸರ್ವೆ ನಂ. 43 ನನ್ನ ಜಮೀನಿನಲ್ಲಿ ಕ್ರಷರ್‌ಗೆ ಲೈನ್ ಎಳೆದಿದ್ದು ಕಂಬ ಬದಲಾಯಿಸಿ ಮತ್ತು ಟಿ.ಸಿ ಆಳವಡಿಸಿಕೊಡಿ ಎಂದು ಮನವಿ ಮಾಡಿರುತ್ತಾರೆ. | ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ತಿಳಿಸಲಾಗಿರತ್ತದೆ. |
| 4) | **ಶ್ರೀ ಪದ್ಮರಾಜ, ಮರಳೇಗಾಲ ಮೊಬೈಲ್ ಸಂಖ್ಯೆ: 9845019519** | |
| | ದೇವಸ್ಥನದ ಬಳಿ ಇರುವ ಟಿ.ಸಿ ಬದಲಾವಣೆ ಮಾಡಿಕೊಡುವಂತೆ ಮನವಿ ಮಾಡಿರುತ್ತಾರೆ. | ಪರಿವರ್ತಕವನ್ನು ಸ್ವಯಂ ಕಾರ್ಯನಿರ್ವಹಣಾ ಯೋಜನೆಯಡಿಯಲ್ಲಿ ಬದಲಾಯಿಸಿಕೊಳ್ಳಲು ತಿಳಿಸಲಾಗಿದೆ. |
| 5) | **ಶ್ರೀ ಮಂಚೇಶ್‌ಗೌಡ, ದೊಡ್ಡಪಾಲ್ಯ ಮೊಬೈಲ್ ಸಂಖ್ಯೆ: 9880474762** | |
| | ದೊಡ್ಡಪಾಳ್ಯದಲ್ಲಿ ಕಬ್ಬಿಣದ ಕಂಬಗಳಿದ್ದು, ಬದಲಾಯಿಸುವುದು ಎಂದು ಕೋರಿರುತ್ತಾರೆ. | ಈಗಾಗಲೇ ಬೆಳಕು ಯೋಜನೆಯಡಿಯಲ್ಲಿ ಕಬ್ಬಿಣ ಕಂಬಗಳನ್ನು ಬದಲಾಯಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸದರಿ ಕಂಬಗಳನ್ನು ಬದಲಾಯಿಸಲು ಕ್ರಮಕೈಗೊಳ್ಳಾಗುವುದೆಂದು ತಿಳಿಸಲಾಯಿತು. |
| 6) | **ಶ್ರೀ ಪದ್ಮನಾಭ, ಬಲ್ಲೇನಹಳ್ಳಿ ಮೊಬೈಲ್ ಸಂಖ್ಯೆ: 9901300348** | |
| | ಸೆಚ್ಚಾಗಿ ಐ.ಪಿ ಲೈನ್ ಆಡಚಣೆ ಆಗುತ್ತಿರುವ ಬಗ್ಗೆ ದಯವಿಟ್ಟು ಲೈನ್ ಟ್ರಿಪ್ ಆಗದಂತೆ ನೋಡುವಂತೆ ಕೋರಿರುತ್ತಾರೆ. | ಮಳೆಗಾಲದಲ್ಲಿ ಅತಿಯಾದ ಗಾಳಿ ಮತ್ತು ಮಳೆಯಿಂದ ಆಡಚಣೆ ಉಂಟಾಗಿರುತ್ತದೆ. ಮುಂದಿನ ದಿನಗಳಲ್ಲಿ ವಿದ್ಯುತ್ ಆಡಚಣೆಯಾಗದಂತೆ ಸೂಕ್ತ ಕೈಗೊಳ್ಳಲು ಎಲ್ಲಾ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು. |

| 7) | ಶ್ರೀ ಪಿ.ಪ್ರಕಾಶ್, ಪಾಲಹಳ್ಳಿ ಮೊಬೈಲ್ ಸಂಖ್ಯೆ: 9880474762 | |
|---|---|---|
| | 1. ಮಳೆಗಾಳಿಗೆ ಲೈನ್ ಟ್ರಿಪ್ ಆಗುತ್ತಿರುತ್ತದೆ, ನಮಗೆ ಮಳೆ ಬಂದರೆ ಊರಿಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ ದಯವಿಟ್ಟು ಪರಿಶೀಲಿಸಿ ವಿದ್ಯುತ್ ಅಡಚಣೆ ಆಗದಂತೆ ಕ್ರಮವಹಿಸಲು ಕೋರಿರುತ್ತಾರೆ.<br>2. ಬೆಳಗೊಳ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯವರೊಂದಿಗೆ ಮನವಿ ಮಾಡಿ ನಿಮ್ಮ ಲೈನ್ ಹತ್ತಿರದ ಮರ ಕಡಿಸುವಂತೆ ತಿಳಿಸಿರುತ್ತಾರೆ. | 1. ಮಳೆಗಾಲದಲ್ಲಿ ಅತಿಯಾದ ಗಾಳಿ ಮತ್ತು ಮಳೆಯಿಂದ ಅಡಚಣೆ ಉಂಟಾಗಿರುತ್ತದೆ. ಮುಂದಿನ ದಿನಗಳಲ್ಲಿ ವಿದ್ಯುತ್ ಅಡಚಣೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲು ಎಲ್ಲಾ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು.<br>2. ಬೆಳಗೊಳ ವ್ಯಾಪ್ತಿಯಲ್ಲಿ ವಿದ್ಯುತ್ ಲೈನಿಗೆ ತಗುಲುವ ರೆಂಬೆ-ಕೊಂಬೆಗಳನ್ನು ಕಡಿಯಲು ಲೈನುಗಳನ್ನು ಕಳಚಿಕೊಡಲು ಈಗಾಗಲೇ ಅಂದಾಜು ಪಟ್ಟಿ ತಯಾರಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಲೈನಿಗೆ ತಗಲುವ ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲು ತಿಳಿಸಲಾಗಿರುತ್ತದೆ. |

ಸಭೆಯನ್ನು 1:00ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ದಿನಾಂಕ: 19/06/2020

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2020-21/312-14

**ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1) ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2) ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3) ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ನಿಗಮ ಕಾರ್ಯಾಲಯ, ಚಾವಿಸನಿನಿ, ಮಂಡ್ಯ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
4) ಕಛೇರಿ ಪ್ರತಿ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.